**ಸಾಕ್ಷಿಗೆ ದಿನಾಂಕಃ 30.12.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಬಿ.ಜಿ.ಎಸ್. ವಕೀಲರಿಂದಃ**

ದಿ.06.01.2014 ರಂದು ನಾನು ಆರೋಪಿಯ ಬಳಿ ಸಾಲವನ್ನು ಕೇಳಿರುವುದಿಲ್ಲ. ನನ್ನ ಪಿರ್ಯಾದಿಯಲ್ಲಿ ದಿ.06.01.2014 ರಂದು ಆರೋಪಿಯ ಬಳಿ ಸಾಲವನ್ನು ಕೇಳಿರುತ್ತೇನೆ ಎಂದು ಹೇಳಿರುವುದು ಸರಿ ಇರುವುದಿಲ್ಲ. ನಾನು ಕಾವೇರಿ ಗ್ರಾಮೀಣ ಬ್ಯಾಂಕ್, ತಲಕಾಡಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಎಸ್.ಬಿ.ಐ.ನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನನ್ನ ಬ್ಯಾಂಕಿನ ಖಾತೆಯನ್ನು ನಾನೇ ನಿರ್ವಹಿಸುತ್ತೇನೆ. ನನ್ನನ್ನು ಹೊರತುಪಡಿಸಿ ಬೇರೆಯವರು ನನ್ನ ಬ್ಯಾಂಕಿನ ಖಾತೆಯನ್ನು ನಿರ್ವಹಿಸುವುದಿಲ್ಲ. ನನ್ನ ದೂರು ಮತ್ತು ಮುಖ್ಯವಿಚಾರಣೆಯಲ್ಲಿ ಆರೋಪಿಗೆ ಸಾಲ ನೀಡಿದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಸಾಲವಾಗಿ ಒಟ್ಟಾಗಿ 70 ಲಕ್ಷ ರೂ.ಗಳನ್ನು ನೀಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ದೂರಿನಲ್ಲಿ 70 ಲಕ್ಷ ರೂ.ಗಳನ್ನು ಆರೋಪಿಗೆ ಸಾಲವಾಗಿ ನೀಡಿದ ಬಗ್ಗೆ ನಮೂದು ಮಾಡಿರುವುದಿಲ್ಲ. 36 ಲಕ್ಷ ಮತ್ತು 34 ಲಕ್ಷ ಗಳನ್ನು ಆರೋಪಿಗೆ ನೀಡಿದ ಬಗ್ಗೆ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಒಂದೇ ದಿನಾಂಕದಂದು ಸದರಿ ಹಣವನ್ನು ನೀಡಿರುವುದಿಲ್ಲ ಬದಲಾಗಿ ಸ್ವಲ್ಪ ಸ್ವಲ್ಪ ಹಣವನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಸದರಿ ಹಣವನ್ನು ನೀಡಿದ ದಿನಾಂಕದ ಬಗ್ಗೆ ದೂರು ಹಾಗೂ ನನ್ನ ನೋಟಿಸಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಸಾಲವನ್ನು ನೀಡಿರುವುದಿಲ್ಲ ಹಾಗೂ ಆರೋಪಿಯು ನನಗೆ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಆರೋಪಿಗೆ ಸಾಲವನ್ನು ನೀಡಿದ ಬಗ್ಗೆ ಹಾಗೂ ಆರೋಪಿಯು ಚೆಕ್ ನ್ನು ನೀಡಿದ ಬಗ್ಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯಿಂದ ಪಡೆದ ಹಣದ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗುರುದೇವ ಪೆಟ್ರೋಲ್ ಬಂಕ್ ಸರ್ವಿಸ್ ಸ್ಟೇಷನ್ ನನಗೆ ಸೇರಿರುತ್ತದೆ ಹಾಗೂ ಅದು ತಲಕಾಡಿನಲ್ಲಿ ಇರುತ್ತದೆ. ಸುಮಾರು 14 ವರ್ಷದಿಂದ ಅದನ್ನು ನಡೆಸುತ್ತಿದ್ದೇನೆ. ಸದರಿ ವ್ಯವಹಾರದಿಮದ ನನಗೆ ಪ್ರತಿ ತಿಂಗಳು ಖರ್ಚನ್ನು

ಕಳೆದು 1 ½ ಯಿಂದ 2 ಲಕ್ಷ ರೂ.ಗಳ ಆದಾಯ ಬರುತ್ತದೆ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದು, ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆದಾಯ ತೆರಿಗೆಯಲ್ಲಿ ಆರೋಪಿಗೆ ಸಾಲ ನೀಡಿದ ಬಗ್ಗೆ ನಮೂದು ಮಾಡಿರುವುದಿಲ್ಲ. 2013 ರಿಂದ 2017 ರವರೆಗೆ ಪೆಟ್ರೋಲ್ ಬಂಕ್ ನಷ್ಟದಿಂದ ಕೂಡಿತ್ತು ಎಂದರೆ ಸರಿಯಲ್ಲ. ಈ ಸಂಬಂಧ ಆರೋಪಿಯೊಂದಿಗೆ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 9/2018 ನ್ನು ಆರೋಪಿಯು ನನ್ನ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಗೆ ನಾನು ತಕರಾರು ಸಲ್ಲಿಸಿದ್ದೆನು. ಸದರಿ ದಾವೆಯು ಮೈಸೂರಿನ II ADJ ನ್ಯಾಯಾಲಯಕ್ಕೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಅದರ ಅಸಲು ದಾವಾ ಸಂಖ್ಯೆ 286/2024 ಆಗಿರುತ್ತದೆ ಎಂದರೆ ಸರಿ. ಪಾಲುದಾರಿಕೆಯನ್ನು ಮಾಡಿಕೊಳ್ಳುವಾಗ 37 ಲಕ್ಷದ 50 ಸಾವಿರ ರೂ.ಗಳನ್ನು ಆರೋಪಿಯು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ದಿ.20.12.2013 ರಂದು ING vysya ಬ್ಯಾಂಕಿನ ಚೆಕ್ ನಂ.1090267 ರ ಮೂಲಕ ಆರೋಪಿಯು ನನಗೆ 8 ಲಕ್ಷ ರೂ.ಗಳನ್ನು, ದಿ.21.12.2013 ರಂದು ಬ್ಯಾಂಕಿನ ಚೆಕ್ ನಂ.1090268 ರ ಮೂಲಕ ಆರೋಪಿಯು ನನಗೆ 4 ಲಕ್ಷ ರೂ.ಗಳನ್ನು, ಚೆಕ್ ನಂ.1090275 ರ ಮೂಲಕ ಆರೋಪಿಯು ನನಗೆ 5 ಲಕ್ಷ ರೂ.ಗಳನ್ನು, ಚೆಕ್ ನಂ.1090264 ರ ಮೂಲಕ ಆರೋಪಿಯು ನನಗೆ 16 ಲಕ್ಷ ರೂ.ಗಳನ್ನು, ಪ್ರಾಮಿಸರಿ ನೋಟ್ ನ ಮೂಲಕ ಆರೋಪಿಯು ನನಗೆ 2 ಲಕ್ಷಗಳನ್ನು, ಒಟ್ಟಾಗಿ 37,50,000/- ರೂ.ಗಳನ್ನು ಆರೋಪಿಯು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**